## 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ. 96 /2019

P.W : 20

C.W: 27

**ದಿನಾಂಕ 09.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ಸಿ.ಆರ್. ಸುಮಾ

**ಗಂಡನ ಹೆಸರು** : ಜೆ. ಸುರೇಶ್ ಬಾಬು

**ವಯಸ್ಸು** : 57 ವರ್ಷ

**ವೃತ್ತಿ** : ಹಿರಿಯ ಮಕ್ಕಳ ತಜ್ಞರು, ಸರ್ಕಾರಿ ಆಸ್ಪತ್ರೆ, ತಿಪಟೂರು

**ವಾಸಸ್ಥಳ** : ತಿಪಟೂರು

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ತಿಪಟೂರು ಜಿಲ್ಲಾ ಆಸ್ಪತ್ರೆಯಲ್ಲಿ ಜುಲೈ 2025 ರಿಂದ ಇಲ್ಲಿಯವರೆಗೂ ತಿಪಟೂರು ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ಮಕ್ಕಳ ತಜ್ಞರಾಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ದಿ.14.11.2018 ರಂದು ಸಂಜೆ 06.40 ಗಂಟೆಗೆ ನಾನು ಕುಣಿಗಲ್ ಸರ್ಕಾರಿ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾಗ ಪ್ರಕಾಶ್ ಬಿನ್ ನರಸೀಯಪ್ಪ , 45 ವರ್ಷ ರವರು ಸಾರ್ವಜನಿಕ ಗಲಾಟೆಯ ಹಿನ್ನಲೆಯಲ್ಲಿ ನಮ್ಮ ಆಸ್ಪತ್ರೆಗೆ ಸಾರ್ವಜನಿಕರು ಆತನನ್ನು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ನಾನು ಪ್ರಕಾಶ್ ರವರನ್ನು ಪರೀಕ್ಷಿಸಿದಾಗ ಅವರಿಗೆ ಈ ಕೆಳಕಂಡಂತೆ ಗಾಯಗಳು ಆಗಿದ್ದವು.

ಎರಡು ಕಣ್ಣುಗಳು ಕೆಂಪಾಗಿದ್ದು ಹುರಿ ಇತ್ತು, ಕಣ್ಣಿಗೆ ಕಾರದ ಪುಡಿ ಎರಚಿದ್ದಾಗಿ ಹೇಳಿದರು. ಎಡ ಕೈಯ ಮೇಲೆ 1 x 1 ಇಂಚು ಹರಿತವಾದ ಗಾಯ ಇತ್ತು. ಎಡಕೈ ಮೇಲೆ ರಕ್ತ ಹೆಪ್ಪುಗಟ್ಟಿದ ಗಾಯ ಆಗಿತ್ತು. ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಅದನ್ನು ಈಗ ನಿ.ಪಿ.57 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.57(ಎ) ಎಂದು ಗುರುತಿಸಲಾಯಿತು. ನಿ.ಪಿ.57 ರಲ್ಲಿ ಕಾಣಿಸಿರುವ ಗಾಯಗಳು ಮಚ್ಚಿನಿಂದ ಹಲ್ಲೆ

ಮಾಡಿದಾಗ ಆಗುವ ಸಾಧ್ಯತೆ ಇರುತ್ತದೆ. ಸದರಿ ಮಚ್ಚನ್ನು ಈಗ ಮು.ಮಾ.11 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿಗಳ ಪರ ಶ್ರೀ. ಎಂ.ಬಿ.ಜಡ್. ವಕೀಲರಿಂದಃ**

ನಾನು ಕುಣಿಗಲ್ ಆಸ್ಪತ್ರೆಯಲ್ಲಿ 11 ವರ್ಷದಿಂದ ವೈದ್ಯರಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಯಾವ ವ್ಯಕ್ತಿಯು ಗಾಯಾಳುವನ್ನು ಕರೆದುಕೊಂಡು ಬಂದಿದ್ದಾರೋ ಅವರ ಹೆಸರನ್ನು ಗಾಯದ ಪ್ರಮಾಣಪತ್ರದಲ್ಲಿ ನಮೂದಿಸುತ್ತೇವೆ ಎಂದರೆ ಸರಿಯಲ್ಲ. ಯಾರಿಂದ ಗಾಯ ಆಗಿದೆ ಎನ್ನುವ ಬಗ್ಗೆ ನಿ.ಪಿ.57 ರಲ್ಲಿ ನಮೂದಿಲ್ಲ. ಗಾಯಾಳುವಿಗೆ ಯಾವುದೇ ಗುರುತುಗಳು ಇರಲಿಲ್ಲ. ಯಾವ ವ್ಯಕ್ತಿಯಿಂದ ಹಲ್ಲೆ ಆಗಿದೆ ಎಂದು ಗಾಯಾಳು ನನ್ನ ಬಳಿ ಹೇಳಿರುವುದಿಲ್ಲ. ಒಬ್ಬ ವ್ಯಕ್ತಿಯು ದ್ವಿ ಚಕ್ರವಾಹನದಲ್ಲಿ ಜೋರಾಗಿ ಗಾಡಿಯಲ್ಲಿ ಹೋಗುತ್ತಿದ್ದಾಗ ಮಣ್ಣು ಆತನ ಕಣ್ಣಿಗೆ ಜೋರಾಗಿ ಬಿದ್ದರೇ ಕಣ್ಣುಗಳಲ್ಲಿ ಬರ್ನಿಂಗ್ ಸೆನ್ ಸೇಷನ್ ಆಗುತ್ತದೆ ಎಂದರೆ ಸರಿಯಲ್ಲ. ಕಾರದ ಪುಡಿ ಎರಚಿದ್ದಾರೆ ಎಂದು ಗಾಯಾಳು ನನ್ನ ಬಳಿ ಹೇಳಿದಂರು ಎಂದು ನಿ.ಪಿ.57 ರಲ್ಲಿ ನಮೂದಿಸಿಲ್ಲ. ಯಾವುದೇ ವಾಹನದಿಂದ ಕೆಳಗೆ ಬಿದ್ದರೇ ಗಾಯದ ಪ್ರಮಾಣಪತ್ರದಲ್ಲಿ ಹೇಳಿರುವ 2 ನೇ ಗಾಯ ಸದರಿ ವ್ಯಕ್ತಿಗೆ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ಪೋಲೀಸರ ಮಾತನ್ನು ಕೇಳಿ ಸುಳ್ಳು ಗಾಯದ ಪ್ರಮಾಣಪತ್ರವನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ಮು.ಮಾ.11 ಮಚ್ಚನ್ನು ನಮ್ಮ ಬಳಿ ತೋರಿಸಿ ಆ ಬಗ್ಗೆ ಯಾವುದಾದರೂ ಅಭಿಪ್ರಾಯವನ್ನು ನಮ್ಮಿಂದ ತೆಗೆದುಕೊಂಡಿದ್ದಾರೆಯೇ ಎನ್ನುವುದು ನನಗೆ ನೆನಪಿಲ್ಲ. ನ್ಯಾಯಾಲಯದ ಮುಂದಿರುವ ಮು.ಮಾ.11 ಮಚ್ಚನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು.